## ನಿಮ್ಮೊಡನೆ

# ಆಳುವವರ ತಲೆಯಲ್ಲಿ ಮಲ!

ಕರ್ನಾಟಕದ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಪೌರ ಕಾರ್ಮಿಕರು ಈಗಲೂ ತಲೆಯ ಮೇಲೆ, ಹೆಗಲ ಮೇಲೆ ಮಲದ ಡಬ್ಬಿ ಹೊತ್ತು ಸಾಗುತ್ತಾರೆ! ಸಾರ್ವಜನಿಕ ಶೌಚಾಲಯದ ಮಲದ ಗುಂಡಿಗೆ ಇಳಿದು ಕೈಯಿಂದಲೇ ಸ್ವಚ್ಛಗೊಳಿಸುತ್ತಾರೆ! ಸಚಿವರು, ಶಾಸಕರು, ಪುರಸಭಾ ಮುಖ್ಯಸ್ಥರಿಗೆ ಈ ಬಗ್ಗೆ ಕೇಳಿದರೆ, 'ಹೌದಾ! ನಮಗೆ ಗೊತ್ತೇ ಇಲ್ಲ', 'ನಮ್ಮಲ್ಲಿ ಮಲ ಹೊರುವ ಪದ್ಧತಿ ಇಲ್ಲವೇ ಇಲ್ಲ' ಎನ್ನುವ ಉತ್ತರಗಳು ಬಂದಿದೆ!

ಹಾವೇರಿ ತಾಲ್ಲೂಕಿನ ಸವಣೂರಿನಲ್ಲಿ ಭಂಗಿ ಕೆಲಸ ಮಾಡುತ್ತಿದ್ದ ದಲಿತರ ಮನೆಗಳನ್ನು ಕೆಡವ ಹೊರಟ ಪುರಸಭೆ ಅಧಿಕಾರಿಗಳ  ವಿರುದ್ಧ ಪ್ರತಿಭಟಿಸಲು ತಮ್ಮ ಮೈಮೇಲೆ ಮಲ ಸುರಿದುಕೊಂಡದ್ದನ್ನು ಮಾಧ್ಯಮಗಳು ವರದಿ ಮಾಡಿದಾಗ, ಬೆಂಗಳೂರಿನಲ್ಲಿ ಮಲ–ಗಿರುವ ಅಧಿಕಾರಸ್ಥರು ಎಚ್ಚರವಾಗಿದ್ದಾರೆ. 'ಸ್ಥಳೀಯ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೇವೆ. ಪುನರ್ವಸತಿ ಕೈಗೊಳ್ಳುತ್ತೇವೆ' ಎಂದೆಲ್ಲ ಭರವಸೆ ನೀಡಿದ್ದಾರೆ.

ಮನುಷ್ಯರೆಲ್ಲರೂ ನಾಚಿ ತಲೆ ತಗ್ಗಿಸಬೇಕಾದ ಸಂಗತಿ ಇದು. ಕೋಟ್ಯಂತರ ರೂಪಾಯಿಗಳನ್ನು ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿರುವ, ನೈರ್ಮಲ್ಯ ಕಾಪಾಡಲು ನೂರೆಂಟು ಯೋಜನೆಗಳನ್ನು ತಂದಿರುವ ಸರಕಾರ, ಹಳ್ಳಿ, ಪಟ್ಟಣಗಳೆನ್ನದೆ ಎಲ್ಲೆಡೆ ಇವತ್ತಿಗೂ ಜೀವಂತವಾಗಿರುವ ಈ ಮಲ ಹೊರುವ ಪದ್ಧತಿಯ ಕುರಿತು ನಿಸ್ಸೀಮ ನಿರ್ಲಕ್ಷ್ಯ ತಾಳಿರುವುದನ್ನು ನೋಡಿದರೆ, ನಮ್ಮನ್ನು ಆಳುವವರ ತಲೆಯೊಳಗೆ ಮಲವೇ ತುಂಬಿದೆಯೇನೋ ಎಂದನ್ನಿಸುತ್ತದೆ! ಈ ಅಮಾನವೀಯ ಪದ್ಧತಿಯನ್ನು ಖಂಡಿಸಲು ಯಾವ ಶಬ್ದವೂ ಕಡಿಮೆಯೇ.

ಸವಣೂರಿನ ಪ್ರಕರಣದ ಬೆನ್ನಲ್ಲೇ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲೂ ತಲೆ ಮೇಲೆ ಮಲ ಹೊರುವ ಪದ್ಧತಿ ಇನ್ನೂ ಜೀವಂತವಾಗಿರುವುದು ಚಿತ್ರಸಹಿತ ವರದಿಯಾಗಿದೆ. ಮೇಯರ್‌ರನ್ನು ಈ ಬಗ್ಗೆ ಪ್ರಶ್ನಿಸಿದರೆ, 'ನನ್ನ ಗಮನಕ್ಕೆ ಬಂದೇ ಇಲ್ಲ; ನಮ್ಮಲ್ಲಿ ಆ ಪದ್ಧತಿಯೇ ಇಲ್ಲ' ಎಂದಿದ್ದಾರೆ! ಸರಕಾರ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿ ಎಷ್ಟೋ ವರ್ಷಗಳು ಉರುಳಿವೆ. ಆದರೆ ವಾಸ್ತವವೆಂದರೆ, ಕರ್ನಾಟಕದ ಬಹುತೇಕ ಹೋಬಳಿ, ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ನಗರಪಾಲಿಕೆಯ ಅಕ್ರಮ ಬಡಾವಣೆಗಳಲ್ಲಿ ಈ ಪದ್ಧತಿ ಇನ್ನೂ ಜೀವಂತವಾಗಿದೆ. ಸ್ಥಳೀಯ ಸಂಸ್ಥೆಗಳೇ ಭಂಗಿಗಳನ್ನು ನೇಮಿಸಿಕೊಂಡು ಅವರ ಮೂಲಕ ಈ 'ತಲೆಹೊರೆ ಮಲ ಪದ್ಧತಿ'ಯನ್ನು ಪೋಷಿಸಿಕೊಂಡು ಬಂದಿವೆ. ಹೀಗೆ ಮಲ ಹೊರುವ ಪೌರಕಾರ್ಮಿಕರು ಕೆಲಸ ಮಾಡುವಾಗ ಕೊಳಕನ್ನು ಸಹಿಸಲೆಂದೇ ಕಂಠಪೂರ್ತಿ ಅಗ್ಗದ ಸಾರಾಯಿ ಕುಡಿದು ಇನ್ನೊಂದೆಡೆ ಆರೋಗ್ಯ ಜೀವನವನ್ನೇ ಬಲಿ ಕೊಡುತ್ತಿದ್ದಾರೆ.

ಪಾಲಿಕೆಯ, ಪುರಸಭೆಗಳ ಅಧಿಕಾರಸ್ಥರು ಈ ಬಗ್ಗೆ ಹೇಳುವುದೂ ತಮಾಷೆಯಾಗಿದೆ. "ನೆಲದಲ್ಲಿ ಬುಟ್ಟಿ ಇಟ್ಟು ಅದರಲ್ಲಿ ವಿಸರ್ಜಿಸಿದ ಮಲವನ್ನು ಎತ್ತಿ ಕೊಂಡೊಯ್ದರೆ ಮಾತ್ರ ಅದು ಕಾನೂನು ವ್ಯಾಪ್ತಿಯಲ್ಲಿ ಬರುತ್ತದೆ. ಬಾಕ್ಸ್ ಮಾದರಿಯ ಪಿಟ್‌ನಲ್ಲಿ ವಿಸರ್ಜಿಸಿದ ಮಲ ಕಟ್ಟಿಕೊಂಡಿದ್ದು ಅದನ್ನು ಎತ್ತಿ ಕೊಂಡೊಯ್ದರೆ ಕಾನೂನು ವ್ಯಾಖ್ಯೆಯಂತೆ ಅದು 'ಮಲ ಹೊರುವ ಪದ್ಧತಿ' ಆಗುವುದಿಲ್ಲ!" ಎನ್ನುತ್ತಿದ್ದಾರೆ ಅವರು! 'ಅಧಿಕಾರಸ್ಥರ ತಲೆಯೊಳಗೂ ಜಾತೀಯ ಮಲ ತುಂಬಿದೆ' ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಿಲ್ಲ!

ಬಹುತೇಕ ಪುರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದೇ ಈ ಅಮಾನವೀಯ ಪದ್ಧತಿ ಮುಂದುವರಿಯಲು ಮುಖ್ಯ ಕಾರಣ. ಸಣ್ಣ ಪುರಸಭೆಗಳನ್ನು ಕೇಳಿದರೆ, ಒಳಚರಂಡಿ ನಿರ್ಮಿಸಲು ಹಣ ಇಲ್ಲ ಎನ್ನುತ್ತಾರೆ. ನಗರಪಾಲಿಕೆಗಳಲ್ಲಿ ಕೇಳಿದರೆ, 'ಈ ಪದ್ಧತಿ ಇರುವ ಬಡಾವಣೆಗಳು ಇನ್ನೂ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಮಗೆ ಹಸ್ತಾಂತರವಾಗಿಲ್ಲ. ಹಾಗಾಗಿ ಅಲ್ಲಿ ಒಳಚರಂಡಿ ವ್ಯವಸ್ಥೆ ಆಗಿಲ್ಲ' ಎನ್ನುತ್ತಾರೆ! ಕಾನೂನು ಕೂಡಾ ಇಲ್ಲಿ  ಇಂತಹ ಅಮಾನವೀಯ ಕೆಲಸಕ್ಕೆ ನೆರವು ನೀಡಲೆಂದೇ ರೂಪಿತವಾದಂತಿದೆ! ಸವಣೂರಿನಲ್ಲಿ ಮಾತ್ರ ಇವತ್ತು ಒಳಚರಂಡಿ ಮಾಡಲು ಸರಕಾರ ಹಣ ಕೊಟ್ಟರೆ, ಭಂಗಿಗಳ ಪುನರ್ವಸತಿಗೆ ವ್ಯವಸ್ಥೆ ಮಾಡಿದಾಕ್ಷಣ ಸಮಸ್ಯೆ ಮುಗಿಯುವುದಿಲ್ಲ. ರಾಜ್ಯದ ಉಳಿದೆಡೆಯೂ ಈ ಕೆಲಸ ಆಗಬೇಕಿದೆ.

ಜಾತಿ ಪದ್ಧತಿಯ ಅತ್ಯಂತ ಅಮಾನವೀಯ ಮುಖಗಳಲ್ಲಿ ಸ್ಥಳೀಯ ಸಂಸ್ಥೆಗಳ ಈ ಮಲಸಾಗಣೆ ಕ್ರಮವೂ ಒಂದು. ಭಂಗಿ ಕೆಲಸಕ್ಕೆ ಎಲ್ಲೆಡೆ ಬಹುತೇಕ ಮಾದಿಗ ಸಮುದಾಯದವರೇ ನೇಮಕಗೊಂಡಿದ್ದಾರೆ. ಸರ್ಕಾರದಲ್ಲೂ ಜಾತಿ ಪದ್ಧತಿಯ ಬರ್ಬರ ನಿಲುವು ಹೇಗೆ ಘನೀಭೂತವಾಗಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ಸರಕಾರದ ಎಲ್ಲ ನೌಕರಿಗಳಲ್ಲಿ ಮೀಸಲಾತಿಯನ್ನು ಪ್ರಶ್ನಿಸುವ, ತಮಗೂ ಬೇಕೆಂದು ಆಗ್ರಹಿಸುವ ಇತರ ಜಾತಿಗಳವರು ಈ ಹುದ್ದೆಗಳಲ್ಲಿ ಮಾತ್ರ ಮೀಸಲಾತಿ ಆಗ್ರಹಿಸುವುದಿಲ್ಲ!

ಕೇವಲ ಕಾನೂನಿನಿಂದ ನಿರ್ಮೂಲನೆಯಾಗುವ ಘೋರ ಪಾತಕ ಇದಲ್ಲ. ಜಾತಿವ್ಯವಸ್ಥೆ ಗಟ್ಟಿಯಾಗಿರುವ ನಮ್ಮ ಸಮಾಜದಲ್ಲಿ ಈ ರೀತಿಯ  ಅಮಾನವೀಯ ಘಟನೆಗಳು ಇನ್ನೂ ನಡೆಯುತ್ತಲೇ ಇರುತ್ತವೆ. ನಾಗರಿಕರ ತಲೆಯಲ್ಲಿ ತುಂಬಿರುವ ಮಲವನ್ನು ಎತ್ತಿ ಹಾಕುವುದು ಹೇಗೆ?

■ ಬಿ.ಎಂ. ಹನೀಫ್

ಜಾತಿ ಪದ್ಧತಿಯ ಅತ್ಯಂತ ಅಮಾನವೀಯ ಮುಖಗಳಲ್ಲಿ ಸ್ಥಳೀಯ ಸಂಸ್ಥೆಗಳ ಈ ಮಲಸಾಗಣೆ ಕ್ರಮವೂ ಒಂದು. ಭಂಗಿ ಕೆಲಸಕ್ಕೆ ಎಲ್ಲೆಡೆ ಬಹುತೇಕ ಮಾದಿಗ ಸಮುದಾಯದವರೇ ನೇಮಕಗೊಂಡಿದ್ದಾರೆ. ಸರ್ಕಾರದಲ್ಲೂ ಜಾತಿ ಪದ್ಧತಿಯ ಬರ್ಬರ ನಿಲುವು ಹೇಗೆ ಘನೀಭೂತವಾಗಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ಸರಕಾರದ ಎಲ್ಲ ನೌಕರಿಗಳಲ್ಲಿ ಮೀಸಲಾತಿಯನ್ನು ಪ್ರಶ್ನಿಸುವ, ತಮಗೂ ಬೇಕೆಂದು ಆಗ್ರಹಿಸುವ ಇತರ ಜಾತಿಗಳವರು ಈ ಹುದ್ದೆಗಳಲ್ಲಿ ಮಾತ್ರ ಮೀಸಲಾತಿ ಆಗ್ರಹಿಸುವುದಿಲ್ಲ!

